(ಇಂದು ದಿನಾಂಕ 15-11-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - 2 ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎನ್. ವಕೀಲರಿಂದ-**

ನಮ್ಮ ಮನೆ ಆರ್.ಸಿ.ಸಿ. ಮನೆ. ಸದರಿ ಮನೆಯು 11 ಅಡಿ ಎತ್ತರದಲ್ಲಿ ಇರುತ್ತದೆ. ನಮ್ಮ ಮನೆ ಕಟ್ಟುವ ಸಮಯದಲ್ಲಿ ವಿದ್ಯುತ್ ತಂತಿಯ ಸಮಸ್ಯೆ ಇರಲಿಲ್ಲ. ಸಾಮಾನ್ಯವಾಗಿ ಪ್ರಜ್ಞಾವಂತರು ವಿದ್ಯುತ್ ತಂತಿ ಹಾದುಹೋಗುವ ಕೆಳಗಡೆ ಮನೆಯನ್ನು ಕಟ್ಟುವುದಿಲ್ಲ ಎಂದರೆ ಗೊತ್ತಿಲ್ಲ. ನಮ್ಮ ಮನೆಯಿಂದ 50 ಫೂಟ್ ದೂರ ಇರುವ ವಿದ್ಯುತ್ ಕಂಬದಿಂದ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತೇವೆ. ಈ ವ್ಯಾಜ್ಯದಲ್ಲಿರುವ ವಿದ್ಯುತ್ ಕಂಬವು ನಮ್ಮ ಮನೆಯಿಂದ 10 ಫೂಟ್ ದೂರದಲ್ಲಿ ಇದೆ.

ದಾವಾ ಪರಿಶಿಷ್ಟದಲ್ಲಿ ಕಾಣಿಸಿರುವ 'ಎ' ಎಂದು ಗುರುತಿಸಿರುವ ವಿದ್ಯುತ್ ಕಂಬದಿಂದ ವಿದ್ಯುತ್ ತಂತಿಯನ್ನು ತೆರವುಗೊಳಿಸಬೇಕೆಂದು ನಾನು 2 ನೇ ಪ್ರತಿವಾದಿ, ಗೋವಿಂದಪ್ಪ ಮತ್ತು ವಿದ್ಯಾ ರಾಮಾ ನಾಯ್ಕ ಇವರನ್ನು ಕೇಳಿಕೊಂಡಿರುತ್ತೇನೆ. ಸದರಿ ಮೂರೂ ಮನೆಯವರಿಗೆ ಈ ವ್ಯಾಜ್ಯದಲ್ಲಿರುವ ವಿದ್ಯುತ್ ಕಂಬದಿಂದಲೇ ವಿದ್ಯುತ್ ಸಂಪರ್ಕ ಹೋಗುತ್ತದೆ ಎಂದರೆ ಸರಿ. ಗೋವಿಂದಪ್ಪ ಮತ್ತು ವಿದ್ಯಾ ರಾಮಾ ನಾಯ್ಕ ಇವರು ನಮ್ಮ ಮನೆಯ ಸದಸ್ಯರು ಎಂದರೆ ಸರಿ.

ದಾವಾ ನಕಾಶೆಯಲ್ಲಿ 6 ಮತ್ತು 7 ಎಂದು ಗುರುತಿಸಿರುವ ಆಸ್ತಿಯು ನನ್ನ ಹಕ್ಕಿನ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಎಲ್ಲಾ ಕಡೆ ತೆರೆದ ತಂತಿ ಇರುತ್ತದೆ ಎಂದರೆ ಸರಿ. ನಾನು ನನ್ನ ದಾವೆಯಲ್ಲಿ ವಿದ್ಯುತ್ ಶಾಕ್ ಯಾರಿಗೆ ಹೊಡೆದಿರುತ್ತದೆ ಎಂಬ ಬಗ್ಗೆ ನಾನು ತಿಳಿಸಿರುವುದಿಲ್ಲ. ಈ ದಾವೆಯಲ್ಲಿರುವ ವಿದ್ಯುತ್ ತಂತಿ ನಮ್ಮ ಮನೆಗೆ ತಾಗಿದ್ದು ಇರುವುದಿಲ್ಲ ಎಂದರೆ ಮನೆಗೆ ತಾಗಿರುವುದಿಲ್ಲ, ಆದರೆ ಮನೆಗೆ ಸಮೀಪವಾಗಿದೆ. ವಿದ್ಯುತ್ ಶಾಕ್ ಆಗಿರುವ ಬಗ್ಗೆ ನಾನು ಯಾರನ್ನೂ ಕರೆದು ವಿಚಾರಣೆ ಮಾಡಿರುವುದಿಲ್ಲ.

ನಾನು 2 ನೇ ಪ್ರತಿವಾದಿಯ ವಿರುದ್ಧ ದಾವಾ ಖರ್ಚನ್ನು ನೀಡುವಂತೆ ಪರಿಹಾರವನ್ನು ಕೋರಿ ಸಲ್ಲಿಸಿರುತ್ತೇನೆ. ಸದರಿ ದಾವಾ ಖರ್ಚು ಎಷ್ಟು ಎಂದು ನಾನು ಲೆಕ್ಕ ಮಾಡಿರುವುದಿಲ್ಲ. ನಾನು ದಾವೆಯಲ್ಲಿ ತೋರಿಸಿದ ವಿದ್ಯುತ್ ತಂತಿಗೂ ಮತ್ತು 2 ನೇ ಪ್ರತಿವಾದಿಯವರಿಗೂ ಯಾವುದೇ ಸಂಬಂಧ ಇರುವುದಿಲ್ಲ.

ನಾನು ವಿದ್ಯುತ್ ಕೋಟೆಡ್ ತಂತಿಯನ್ನು ಖರೀದಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ವಿದ್ಯುತ್ ತಂತಿಯನ್ನು ಡಿಸಕನೆಕ್ಟ ಮಾಡಲು 1 ನೇ ಪ್ರತಿವಾದಿಯವರು ಅಧಿಕಾರವನ್ನು ಕೊಟ್ಟಿದ್ದಾರೆ ಎಂದರೆ ಲಿಖಿತವಾಗಿ ಕೊಟ್ಟಿರುವುದಿಲ್ಲ, ಆದರೆ ಮೌಖಿಕವಾಗಿ ಕೊಟ್ಟಿರುತ್ತಾರೆ. ಬೇರೆ ಕಂಬದಿಂದ ವಿದ್ಯುತ್ ತಂತಿಯನ್ನು ಹಾಕಿಸಿಕೊಳ್ಳಲು ನನಗೆ ಯಾವುದೇ ಪರವಾನಿಗೆಯನ್ನು ಕೊಟ್ಟಿರುವುದಿಲ್ಲ. ಸದರಿ ವಿದ್ಯುತ್ ತಂತಿಯನ್ನು ಬದಲಾಯಿಸಲು ಬಂದ ಲೈನಮೆನ್ ಯಾರು ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಇಬ್ಬರು ಬಂದಿರುತ್ತಾರೆ. 1 ನೇ ಪ್ರತಿವಾದಿಯವರು ನನ್ನ ವಿರುದ್ಧ ವಿದ್ಯುತ್ ತಂತಿಯನ್ನು ಬದಲಾಯಿಸಿದ ಕುರಿತು ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅದು ಇನ್ನೂ ವಿಚಾರಣೆಯಲ್ಲಿ ಬಾಕಿ ಇರುತ್ತದೆ.

ನಾನು ಜೂಜೆ ಫ್ರಾನ್ಸಿಸ್ ರೊಡ್ರಿಗಸ್ ಇವರೊಂದಿಗೆ ಸೇರಿಕೊಂಡು ವಿದ್ಯುತ್ ತಂತಿಯನ್ನು ಬದಲಾಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಜೂಜೆ ಫ್ರಾನ್ಸಿಸ್ ರೊಡ್ರಿಗಸ್ ಇವರು ಪೊಲೀಸ್ ಠಾಣೆಯಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕುಮಟಾ ಪೊಲೀಸ್ ಠಾಣೆಯಲ್ಲಿ ನನ್ನ ವಿಚಾರಣೆಯನ್ನೂ ಸಹ ಮಾಡಿರುತ್ತಾರೆ ಎಂದರೆ ಸರಿ.

ನಾನು ಯಾವುದೇ ಪರವಾನಿಗೆಯನ್ನು ಪಡೆಯದೇ ವಿದ್ಯುತ್ ತಂತಿಯನ್ನು ಬದಲಾಯಿಸಿರುತ್ತೇನೆ ಎಂದು ಪ್ರಕರಣವನ್ನು ದಾಖಲಿಸಿ ಕೊಂಡಿರುತ್ತಾರೆ ಎಂದರೆ ಸರಿ. ನಾನು ಕಾನೂನುಬಾಹಿರವಾಗಿ ಮಾಡಿದ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ

ಮನೆಗೆ ಹೋಗುವ ವಿದ್ಯುತ್ ಸಂಪರ್ಕವನ್ನು ನಾನು ಕಡಿತಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವ ಮನೆಗೆ ಯಾವ ಕಂಬದಿಂದ ವಿದ್ಯುತ್ ಸಂಪರ್ಕವಾಗಬೇಕೆಂದು 1 ನೇ ಪ್ರತಿವಾದಿಯವರು ನಿರ್ಧರಿಸುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯವರಿಗೆ ಆದ ಖರ್ಚನ್ನು ಭರಿಸಿಕೊಡಲು ನಾನು ಬಾಧ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 1 ನೇ ಪ್ರತಿವಾದಿ ಹಾಗೂ ಆತನ ಪರ ವಕೀಲರು ಗೈರು - ಹಾಜರಾಗಿದ್ದು ಅವರ ಪರ ಯಾರೂ ಪ್ರತಿನಿಧಿಸದೇ ಇದ್ದುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ